ಸೀತಮ್ಮ. ಈ ವಾಕ್ಯ ಆದಮೇಲೆ ಅದು ಅಂತಲೂ. ಇಬ್ಬರಿರುವಂಥಾ ಮನೆಗೆ ಮೂಟೆಗಟ್ಟಲೆ ಅಕ್ಕಿ ತರುವಂಥಾ ಪ್ರಮೇಯ ಏನಿಲ್ಲ. ಐದು ಕೆ.ಜಿ. ತಂದರೆ ಹದಿನೈದು ದಿನ ಕಳೆಯುತ್ತದೆ. ಉರಿಬಿಸಿಲು ಇರುವುದೂ ಅಷ್ಟರಲ್ಲೇ ಇದೆ. ಎಳ್ಳಮಾವಾಸ್ಯೆ ಜಾತ್ರೆ ಕಳೆದು ಎರಡು ತಿಂಗಳಾಗಿದೆ ಅಷ್ಟೇ. ಇನ್ನೂ ಚಳಿ ಹಲ್ಲು ಕಟಗುಟ್ಟಿಸುವಂತಿದೆ. ಶಿವರಾಮಯ್ಯ ಯಾರ ಹತ್ತಿರವಾದರೂ ಮಾತಾಡಲು ನಿಂತರೆಂದರೆ ಇದೇ ಪುರಾಣ. 'ಎಂತಾ ಚಳಿ ಮಾರಾಯ್ರಾ ಈ ವರ್ಷ. ನನ್ನ ಜನ್ಮದಲ್ಲಿ ಈ ನಮೂನಿ ಚಳಿ ಕಂಡಿರ್ಲಿಲ್ಲ...' ಅಂತಲೇ ಶುರುವಾಗುತ್ತದೆ ಮಾತು. ಚಳಿ, ಮಳೆ, ಬಿಸಿಲು ಎಲ್ಲದಕ್ಕೂ ಹೀಗೇ. 'ಜನ್ಮದಲ್ಲಿ ಕಂಡಿರ್ಲಿಲ್ಲ...' ಅಂತಲೇ.

ಸೀತಮ್ಮ ಒಲೆಯ ಮೇಲೆ ಅನ್ನದ ಚರಿಗೆ ಇಡಬೇಕಾದ ಪ್ರಮೇಯ ಈಗೇನಿಲ್ಲ. ಮಗ ಹದಿನೈದು ವರ್ಷದ ಹಿಂದೆಯೇ ಕುಕ್ಕರ್ ತಂದುಕೊಟ್ಟಿದ್ದಾನೆ. ಅದರ ರಬ್ಬರು ಸವೆದಾಗ ಹೊಸದನ್ನು ತರಿಸುವುದಕ್ಕೆ ಸೀತಮ್ಮ ಹತ್ತು ಮಾತು ಕೇಳಬೇಕು. 'ಮೊನ್ನೆ ಮೊನ್ನೆ ತಂದ್ಕೊಟ್ಟಿದ್ದು, ಆಗ್ಲೇ ಸವೆದು ಹೋಯ್ತಾ? ಅದು ಬೇಗ ಸವೀಲಿ ಅಂತ್ಲೇ ಹಂಗೆ ಮಾಡಿಟ್ಟಿರ್ತಾರೆ. ಹೊಸ್ತು ಖರ್ಚಾಗ್ಬೇಕಲ್ಲ? ಇಲ್ದಿದ್ರೆ ಅವರು ಉಪ್ಪರಿಗೆ ಮೇಲೆ ಉಪ್ಪರಿಗೆ ಕಟ್ಸೋದು ಹೆಂಗೆ?' ಏನು ಖರ್ಚಾದರೂ ಹೀಗೊಂದು ಮಾತು ಒಗಾಯಿಸುತ್ತಾರೆ ಶಿವರಾಮಯ್ಯ. ಅದು ಅವರಿಗೆ ಮೈಯುಂಡು ಹೋಗಿದೆ. ಮನೆಯಲ್ಲಿನ ಸಾಮಗ್ರಿಗಳು ಖರ್ಚಾದಾಗಲೂ ಅಷ್ಟೇ, ಮುಖ ಮುರಿಯುವ ಒಂದು ಮಾತಾಡಬೇಕು. ಆಗಲೇ ಅವರಿಗೆ ಸಮಾಧಾನ. 'ಅಷ್ಟು ಬೇಗ ಗ್ಯಾಸು ಖರ್ಚಾಯ್ತಾ? ಅಷ್ಟು ಬೇಗ ಬೇಳೆ ಮುಗೀತಾ? ಅಷ್ಟು ಬೇಗ ಸೋಪು ತಿಕ್ಕಿ ಖರ್ಚು ಮಾಡಿಬಿಟ್ಯಾ?'

'ಕೂತ್ಗಂಡು ತಿಂದೆ ಕಣ್ರೀ...' ಎಂದು ಅನ್ನಬೇಕೆಂದು ಎಷ್ಟೋ ಸಲ ನಾಲಿಗೆ ತುರಿಸಿದ್ದಿದೆ ಸೀತಮ್ಮನಿಗೆ. ಅದೆಲ್ಲಾ ಮನಸ್ಸಿನೊಳಗೆ ಮಾತ್ರ. ಹೊರಗೆ ಬಾಯಿ ಬಿಟ್ಟು ಪಿಟ್ಟೆಂದು ದನಿ ಒಡೆಯುವುದಿಲ್ಲ ಸೀತಮ್ಮ. ಹೆದರಿಕೆ ಮತ್ತ್ಯಾತಕ್ಕಲ್ಲ, 'ಅದು ಹಾಗಲ್ಲ, ಹೀಗೆ...' ಎಂದು ಪ್ರತಿರೋಧದ ಮಾತಾಡಿದರೆ ಗಂಡನಿಗೆ ಸೈಸುವುದಿಲ್ಲ. ನಖಶಿಖಾಂತ ಏರುತ್ತದೆ ಸಿಟ್ಟು.

'ನಾನು ಹೇಳುವುದೆಲ್ಲಾ ಸರಿ, ನಾನು ಮಾಡುವುದೆಲ್ಲಾ ಸರಿ, ನಾನು ಹೇಳಿದ್ದೇ ಪರಮಸತ್ಯ' ಎಂದು ನಂಬಿಕೊಂಡು ಬಿಟ್ಟಿದ್ದಾರೆ ಮನುಷ್ಯ. ಮತ್ತ್ಯಾರು ಅವರ ಮಾತು ಕೇಳುತ್ತಾರೆ? ಕೇಳಿಸಿಕೊಂಡು ಬಾಯಿಗೆ ಕಡುಬು ತುಂಬಿಕೊಂಡು ತೆಪ್ಪಗಿರುತ್ತಾರೆ? ಅಂದಿದ್ದು ಅನ್ನಿಸಿಕೊಳ್ಳಲು ಪುಗಸಟ್ಟೆ ಸಿಗುವುದು ತಾಳಿ ಕಟ್ಟಿ ಕರೆದುಕೊಂಡು ಬಂದ ಹೆಂಡತಿ ಒಬ್ಬಳೇ. ಎಲ್ಲಾ ತಮ್ಮ ಹಾಗಿರುವುದಿಲ್ಲ ಎಂದು ಗೊತ್ತಿದೆ ಸೀತಮ್ಮನಿಗೆ. ದೇವರ ನ್ಯಾಯವೇ ಇಂಥಾದ್ದೇನೋ. ಇಜ್ಜೋಡಿ ಮಾಡಿ ಚಂದ ನೋಡುವುದು ಅವನಿಗೆ ಆಟ ಇರಬಹುದು. ಹೆಂಡತಿ ಬಜಾರಿಯಾಗಿದ್ದರೆ ಗಂಡ ಮೆದುಗಸ್ಥ. ಗಂಡ ವೀರಭದ್ರ ಆಗಿದ್ದರೆ ಹೆಂಡತಿ ಪಾಪದವಳು. ಮುಗ್ದೆ. ಆ ಕಾಲವೇ ಹಾಗಿತ್ತು. ಈಗ ಯಾರಾದರೂ ಹೆಂಡತಿಗೆ ಜಬರ್ದಸ್ತು ಮಾಡಲಿ ನೋಡೋಣ, 'ನೀನೂ ಬೇಡ, ನಿನ್ನ ಸಾವಾಸವೂ ಬೇಡ' ಎಂದು ಋಣ ಕಡಿದುಕೊಂಡುಬಿಡುತ್ತಾರೆ. ಗಂಡನ ಕಡೆಯಿಂದ ಲಕ್ಷಗಟ್ಟಲೆ ಪರಿಹಾರದ ಹಣ ಪಡೆದು ಬಿಡುಗಡೆಯಾದವರ ಕತೆ ಕೇಳಿದರೆ ಸೀತಮ್ಮನಿಗೆ ಮೂಗಿನ ಮೇಲೆ ಬೆರಳಿಡುವಷ್ಟು ಬೆರಗು. 'ಪುಣ್ಯಾತ್ಗಿತ್ತಿ' ಎನ್ನುವ ಮಾತು ಅಂತರಂಗದಲ್ಲೆಲ್ಲೋ ಅನುರಣಿಸಿತೇ? ಸೀತಮ್ಮನಂಥಾ ಹಿರಿ ಮುತ್ತೈದೆಗೆ ಹೀಗೆ ಯೋಚಿಸುವುದು ಕೂಡಾ ಮಹಾಪಾಪ ಅನಿಸಿಬಿಡುತ್ತದೆ. 'ಋಣಾನುಬಂಧ' ಎನ್ನುವುದಿಲ್ಲದಿದ್ದರೆ ಗಂಡ ಹೆಂಡಿರಾಗುವುದು ಅಸಾಧ್ಯ ಎಂದು ಅವರ ನಂಬಿಕೆ.

ಸೀತಮ್ಮ ಅಡುಗೆ ಮನೆಯಿಂದ ಹೊರಗೆ ಹಣಿಕಿದರು. ಗಂಡ ಕುರ್ಚಿಯ ಮೇಲೆ ಕೂತು ಜೂಗರಿಸುತ್ತಿರುವುದು ಕಣ್ಣಿಗೆ ಬಿತ್ತು. ಶುಗರ್ ಕಾಯಿಲೆಯಿಂದ ಇರಬೇಕು, ಬೆಳಿಗ್ಗೆ ತಿಂಡಿ ತಿಂದ ಕೂಡಲೆ ಅವರಿಗೆ ಕಣ್ಣು ಎಳೆಯುತ್ತದೆ. ಎಬ್ಬಿಸುವುದೋ ಬೇಡವೋ ಎನ್ನುವ ದ್ವಂದ್ವ. ಎಬ್ಬಿಸದಿದ್ದರೆ ಪಥ ನಡೆಯಬೇಕಲ್ಲ? ಏನಿದ್ದರೂ ಸ್ನಾನಕ್ಕೆ ಮುಂಚೆ ಅಂಗಡಿಗೆ ಹೋಗಿ ಬಂದರೆ ವಾಸಿ. ಆಮೇಲೆ ಸ್ನಾನ ಮಾಡುವುದು ಸಾವಿರಪಾಲು ಒಳ್ಳೆಯದು. ಹೊರಗಡೆ ಹೋಗುವುದಾದರೂ ಸಲೀಸಾ? ಮೂಗು, ಬಾಯಿ ಮುಚ್ಚುವಂತೆ ಬಟ್ಟೆ ಕಟ್ಟಿಕೊಂಡು ಹೋಗಬೇಕು. ಎಲ್ಲಿಂದ ವಕ್ಕರಿಸಿತೋ ಹಾಳು ಕಾಯಿಲೆ? ಹೆಸರೇ ಕೇಳಿರಲಿಲ್ಲಪ್ಪಾ. 'ಕೊರೊನಾ' ಅಂತೆ. ಟೀವಿ ಹಾಕಿದರೆ ಹೆದರಿಕೆ ಹುಟ್ಟಿಸುವಂತೆ ಅದದೇ ಸುದ್ದಿ. 'ಇವತ್ತು ಇಷ್ಟು ಜನಕ್ಕೆ ಸೋಂಕು ತಗುಲಿಕೊಂಡಿದೆ', 'ನಿನ್ನೆ ಇಷ್ಟು ಜನ ಸತ್ತರು'. ಇಂತಿಷ್ಟು ದೂರದಲ್ಲಿ ನಿಲ್ಲಬೇಕು ಎಂದು ಅಂಗಡಿ ಎದುರು ಪೈಂಟಿನಿಂದ ಚೌಕ ಹಾಕಿಟ್ಟಿದ್ದಾರಂತೆ. ಕಾಯಿಲೆ ಬಂದವರ ಉಸಿರು ತಗುಲಿದರೂ ಸಾಕು, ಅಂಟಿಬಿಡುತ್ತಂತೆ ಕಾಯಿಲೆ. ಮತ್ತೆ ಲಕ್ಷಗಟ್ಟಲೆ ಹುಡಿ ಹಾರುತ್ತದೆ. ಅಷ್ಟು ಕೊಡುತ್ತೇವೆಂದವರಿಗೂ ಆಸ್ಪತ್ರೆಯಲ್ಲಿ ಹಾಸಿಗೆ ಸಿಗದೆ ಎಲ್ಲೆಲ್ಲಿಗೋ ಜಾಗ ಹುಡುಕಿಕೊಂಡು ಅಲೆದಾಡಬೇಕಾದ ಪರಿಸ್ಥಿತಿ. ಸಾಯುತ್ತಾರೋ, ಉಳಿಯುತ್ತಾರೋ ದೈವೇಚ್ಛೆ. ಸತ್ತವರ ಮುಖ ನೈತಾ ತೋರಿಸದೆ ಮಣ್ಣು ಮಾಡಿಬಿಡುತ್ತಾರಂತೆ. ಮೈಯಲ್ಲಿ ಚಳಿ ಹೊಕ್ಕವರಂತೆ ಕಂಪಿಸಿದರು ಸೀತಮ್ಮ. ವಿಧಿಯಿಲ್ಲ. ಮನೆಗೆ ಏನು ಬೇಕಾದರೂ ಗಂಡನನ್ನು ಅಟ್ಟಬೇಕು. ಕೆಲಸದವರನ್ನು ಮನೆ ಹೊಗಿಸಿಕೊಂಡಿಲ್ಲ. ಹೊಗಿಸಿಕೊಳ್ಳುವಷ್ಟು ದೊಡ್ಡಸ್ತಿಕೆಯೂ ಇಲ್ಲ. ಕೆಲಸದವರನ್ನು ಇಟ್ಟುಕೊಂಡವರೂ ಅವರನ್ನು ಬಿಡಿಸಿ ತಮ್ಮ ಮನೆ ಕೆಲಸ ತಾವೇ ಮಾಡಿಕೊಳ್ಳುತ್ತಿದ್ದಾರೆ.

ಬೆಂಗಳೂರು ಪೇಟೆ ಸೇರಿಕೊಂಡವರು ಗಂಟುಮೂಟೆ ಕಟ್ಟಿಕೊಂಡು ಸಂಸಾರಸಮೇತ ಬಂದಿಳಿಯುತ್ತಿದ್ದಾರಂತೆ. ಕೆಲಸ ಕಳೆದುಕೊಂಡು ಕಂಗಾಲಾದವರು ಎಷ್ಟೋ ಜನ. 'ಮನೆಯಲ್ಲೇ ಆಫೀಸಿನ ಕೆಲಸ ಮಾಡುವುದು' ಎಂದು ಊರು ಸೇರಿಕೊಂಡವರು ಮತ್ತಷ್ಟು ಜನ. ಯಾರ ಜೊತೆಗಾದರೂ ನಿಂತು ಕಷ್ಟ ಸುಖದ ಎರಡು ಮಾತಾಡುವಂತಿದೆಯಾ? ಯಾರೂ ಯಾರನ್ನೂ ಹತ್ತಿರ ಸೇರಿಸಿಕೊಳ್ಳುವುದಿಲ್ಲ. ಯಾರೂ ಯಾರ ಮನೆಗೂ ಹೋಗುವುದಿಲ್ಲ. ಚೌಲ, ಮದುವೆ, ಮುಂಜಿ ಜನ ಸೇರುವಂತಾ ಯಾವ ಹೆಚ್ಚು ಕಟ್ಲೆಯೂ ಇಲ್ಲ. ತಮ್ಮ ಸುತ್ತಾ ತಾವೇ ಕೋಟೆ ಕಟ್ಟಿಕೊಂಡು, ಛೇ, ಇಂತಾದ್ದೊಂದು ಕಾಲ ಬರುತ್ತದೆ ಎಂದು ಕನಸಿನಲ್ಲಾದರೂ ಎಣಿಸಿದ್ದಿತ್ತಾ? ಹುಳಗಳಂತೆ ಸಾಯುತ್ತಿದ್ದಾರೆ ಜನ. ಪರಮಾತ್ಮ ಹೋಗುವುದಾದರೆ ಫಟ್ ಎಂದು ಹೋಗಿಬಿಡಬೇಕು. ಉಸಿರಾಡುವುದಕ್ಕೂ ಸಾಧ್ಯವಿಲ್ಲದೆ ಮೂಗಿಗೆ ಕೊಳವೆ ಸಿಕ್ಕಿಸಿಕೊಂಡು ನರಳಬೇಕಾದ ಸ್ಥಿತಿ ಶತ್ರುವಿಗೂ ಬೇಡ

ಸೀತಮ್ಮ ಕೈಚೀಲ ಹಿಡಿದು ಗಂಡನ ಎದುರು ನಿಂತರು. ಊಹೂಂ. ಶಿವರಾಮಯ್ಯನಿಗೆ ಮಂಪರು ಹರಿಯಲಿಲ್ಲ. ಸಣ್ಣಗೆ ಕೆಮ್ಮಿದರು ಸೀತಮ್ಮ. ಇಲ್ಲ. ಇನ್ನು ಬಾಯಿ ಬಿಡದೆ ಬೇರೆ ದಾರಿ ಇಲ್ಲ. 'ಅಕ್ಕಿ ತರ್ಬೇಕಾಗಿತ್ತು...' ತಮಗೆ ತಾವೇ ಹೇಳಿಕೊಳ್ಳುವವರಂತೆ ಕುಂಯ್ಗುಟ್ಟಿದರು ಸೀತಮ್ಮ. ಶಿವರಾಮಯ್ಯ ಕಣ್ಣು ತೆರೆದು ಹೆಂಡತಿಯ ಕಡೆ ನೋಡಿದರು. ಹಾಗಿದ್ದರೆ ಇವರಿಗೆ ನಿದ್ದೆ ಹತ್ತಿದ್ದು ಸುಳ್ಳಾ? ಕಣ್ಣು ಮುಚ್ಚಿಕೊಂಡು ಜೂಗರಿಸುವುದು ಒಂದು ಅಭ್ಯಾಸ ಆಗಿದೆಯಾ? ಹೆಂಡತಿಯ ಕೈಲಿ ಚೀಲ ನೋಡಿ, 'ಏನೋ ಬೇಕಾಗಿದೆ' ಎಂದು ಅಂದಾಜಾಯ್ತು ಶಿವರಾಮಯ್ಯನಿಗೆ. ಹುಬ್ಬು ತನ್ನಷ್ಟಕ್ಕೆ ಗಂಟಾಯ್ತು. 'ಅಕ್ಕಿ' ಅಂದರು ಸೀತಮ್ಮ ತಮ್ಮಷ್ಟಕ್ಕೆ ಮತ್ತೊಮ್ಮೆ. 'ಲಾಕ್‌ಡೌನ್ ಅಂತ ಗೊತ್ತಿದೆಯೇನೇ? ಇನ್ನರ್ಧ ಗಂಟೇಲಿ ಅಂಗಡಿ ಮುಚ್ತಾರೆ. ಮತ್ತೆ ನಾಳೆ ಬೆಳಿಗ್ಗೇನೇ ತೆಗೆಯೋದು.'

ಬೆವರಿಬಿಟ್ಟರು ಸೀತಮ್ಮ. ಅಕ್ಕಿ, ಉಪ್ಪು ಎರಡಿದ್ದರೆ ಗಂಜಿ ಬೇಯಿಸಿಕೊಂಡಾದರೂ ತಿನ್ನಬಹುದು. ಅದೂ ಇಲ್ಲದಿದ್ದರೆ? ಗಂಡ ಮೂರು ಮೂರು ತಿಂಗಳಿಗೊಮ್ಮೆ ರಕ್ತಪರೀಕ್ಷೆ ಮಾಡಿಸಿಕೊಂಡು ಬರುತ್ತಿದ್ದ ಪದ್ಧತಿ ಯಾವತ್ತೋ ಕೈದಾಗಿದೆ. ಜನ ಸೇರಿದಲ್ಲಿಗೆ ವೃಥಾ ಹೋಗಬಾರದು ಎನ್ನುವ ಎಚ್ಚರಿಕೆ. ಅದರಲ್ಲೂ ಅನಿವಾರ್ಯವಲ್ಲದಿದ್ದರೆ ಆಸ್ಪತ್ರೆಯ ದಿಕ್ಕಿಗೆ ತಲೆ ಹಾಕಿ ಮಲಗಬಾರದು. ದೂರದರ್ಶನದಲ್ಲಿ ಕೇಳಿ ಕೇಳಿ ಈ ಸಾಂಕ್ರಾಮಿಕ ರೋಗದ ಸಮಯದಲ್ಲಿ ಹೇಗಿರಬೇಕು, ಹೇಗಿರಬಾರದು ಎನ್ನುವುದು ಬಾಯಿಪಾಠವಾಗಿಬಿಟ್ಟಿದೆ. 'ದುಡ್ಡು ಉಳೀತು' ಎಂದು ಒಳಗಿಂದೊಳಗೆ ಸಂತೋಷಪಟ್ಟುಕೊಂಡಿದ್ದರು ಶಿವರಾಮಯ್ಯ. 'ಡಾಕ್ಟರು ನಮ್ಮ ಒಳ್ಳೆಯದಕ್ಕೇ ಹೇಳುವುದು' ಅನ್ನುವುದನ್ನು ದುಡ್ಡಿನ ಲೆಕ್ಕ ಹಾಕುವವರಿಗೆ ಒಪ್ಪಿಕೊಳ್ಳಲು ಸಾಧ್ಯವಿರಲಿಲ್ಲ. ಸೀತಮ್ಮನೇ ಆದಷ್ಟು ಬೆಲ್ಲ ಸೋಕಿಸದ ಅಡುಗೆ ಮಾಡಿ ಗಂಡನ ಆರೋಗ್ಯದ ನಿಗಾ ವಹಿಸುತ್ತಿದ್ದೇನೆಂದು ತೃಪ್ತಿಪಟ್ಟುಕೊಳ್ಳುತ್ತಾರೆ. ಆಸ್ಪತ್ರೆಗೆ ಹೋಗುವುದನ್ನು ತಪ್ಪಿಸಬಹುದು, ದಿನಸಿ ಸಾಮಾನು ತರುವುದನ್ನು ತಪ್ಪಿಸಲಾಗುವುದೇ? ಉಣ್ಣದೆ ಉಪಾಸ ಇರುವುದಕ್ಕೆ ಸಾಧ್ಯವಿಲ್ಲವಲ್ಲ? ಸೀತಮ್ಮ ನಿರೀಕ್ಷಿಸುತ್ತಿದ್ದ ಮಾತು ಬಂದೇ ಬಂತು, 'ಅನ್ನದ ಚರಿಗೆ ಒಲೇ ಮೇಲಿಟ್ಕೊಂಡು...' ಮುಂದಿನ ಮಾತಿಗೆ ಕಿವಿಯಾಗಲು ಸೀತಮ್ಮ ಅಲ್ಲಿ ನಿಲ್ಲಲಿಲ್ಲ.